**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 75/2018
ಪಿಡಬ್ಲು :17 ಸಿಡಬ್ಲು :8

ಸಾಕ್ಷಿಯ ಹೆಸರು : ಶ್ರೀ.ಲಕ್ಷ್ಮಣ ಹಣಮಂತ ಕೆಳಗಡೆ
ತಂದೆಯ ಹೆಸರು : ಶ್ರೀ.ಹಣಮಂತ ಕೆಳಗಡೆ
ವಯಸ್ಸು : 48 ವರ್ಷ
ಉದ್ಯೋಗ : ಕೂಲಿ ಕೆಲಸ
ವಾಸ್ತವ್ಯ : ಮುಗಳಖೋಡ
ದಿನಾಂಕ : 29-08-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 1 ಫ್ರಾಸಾಃ 1 ಬಸಪ್ಪ ನನಗೆ ಗೊತ್ತಿರುತ್ತಾರೆ. ಚಾಸಾಃ 9 ಫ್ರಾಸಾಃ 6 ವಿಮಲವ್ವ ಅವರು ಫ್ರಾಸಾಃ 1 ರವರ ಹೆಂಡತಿ ನನಗೆ ಗೊತ್ತಿರುತ್ತಾರೆ. ಚಾಸಾಃ 10 ಫ್ರಾಸಾಃ 7 ಜಯಪಾಲ, ಚಾಸಾಃ 11 ಫ್ರಾಸಾಃ 9 ಶಿವಾನಂದ, ಚಾಸಾಃ 12 ಫ್ರಾಸಾಃ 10 ಅನೀಲ, ಚಾಸಾಃ 13 ಫ್ರಾಸಾಃ 8 ವಿಠ್ಠಲ ನನಗೆ ಗೊತ್ತಿರುತ್ತಾರೆ. ಚಾಸಾಃ 14 ರಿಂದ ಚಾಸಾಃ 32 ನನಗೆ ಗೊತ್ತಿರುತ್ತಾರೆ. ಅವರೆಲ್ಲ ನಮ್ಮ ಊರಿನವರು ಹಾಗೂ ನಮ್ಮ ಸಮಾಜದವರು. ಚಾಸಾಃ 35 ಸತ್ಯನಾರಾಯಣರಾವ ನನಗೆ ಪರಿಚಯ ಇರುವುದಿಲ್ಲ. ಚಾಸಾಃ 36 ಮಹಾಂತೇಶ ಗೊಳಸಂಗಿ ಮುಗಳಖೋಡ ಪುರಸಭೆಯ ಮಾಜಿ ಅಧ್ಯಕ್ಷರು. ಚಾಸಾಃ 37 ಯಮನಪ್ಪ ದೇವನ್ನವರ, ಚಾಸಾಃ 38 ಶಂಕರ ಲಕ್ಷ್ಮೇಶ್ವರ, ಚಾಸಾಃ 39 ಸಯ್ಯದ್ ನಾಧಾಪ್ ಅವರುಗಳು ಮುಗಳಖೋಡ ಪುರಸಭೆಯ ಸಿಬ್ಬಂದಿಯವರು. ಚಾಸಾಃ 40 ಅಕ್ಬರ್ ಅತ್ತಾರ, ಚಾಸಾಃ 41 ಬೀರಪ್ಪ ಅಲಕನೂರು ಪರಿಚಯ ಇರುವುದಿಲ್ಲ. ಚಾಸಾಃ 42 ಅಮರ ಅಲಿಯಾಸ ಅಂಬರೀಶ, ಚಾಸಾಃ

43 ರಾಮಚಂದ್ರ ಕುರಾಡೆ ನನಗೆ ಪರಿಚಯ ಇದ್ದಾರೆ. ಆರೋಪಿತರೆಲ್ಲರೂ ನಮ್ಮ ಊರಿನವರು, ನನಗೆ ಗೊತ್ತಿರುತ್ತಾರೆ. ನಾನು ಪರಿಶಿಷ್ಟ ಜಾತಿಯ ಮಾದರ ಜನಾಂಗಕ್ಕೆ ಸೇರಿದ್ದೇನೆ. ಆರೋಪಿತರೆಲ್ಲರೂ ಜೈನ ಸಮುದಾಯಕ್ಕೆ ಸೇರಿದ್ದಾರೆ.

2. ನಮಗೂ ಮತ್ತು ಆರೋಪಿತರಿಗೂ ಜಾಗದ ವಿಚಾರದಲ್ಲಿ ಜಗಳ ಆಗಿತ್ತು. ನಮ್ಮ ಓಣಿಯ ಹತ್ತಿರ ಇರುವ ಜಾಗದ ವಿಚಾರವಾಗಿ ಜಗಳ ಆಗಿತ್ತು. ಆ ಜಾಗವನ್ನು ತಟ್ಟಿ ಮನೆಯವರ ಜಾಗ ಎಂದು ಕರೆಯುತ್ತಾರೆ. ಚಾಸಾಃ 1 ಬಸಪ್ಪ ಅವರು ಆ ಜಾಗವನ್ನು ನಮ್ಮದು ಎಂದು ಹೇಳುತ್ತಿದ್ದರು, ಆರೋಪಿತರು ಅದೇ ಜಾಗವನ್ನು ನಮಗೆ ಸೇರಿದ್ದೆಂದು ಹೇಳುತ್ತಿದ್ದರು.

3. ಆ ವಿಚಾರವಾಗಿ ಚಾಸಾಃ 1 ಬಸಪ್ಪ ಅವರು ದೂರು ಕೊಟ್ಟಿದ್ದಾರೆ. ಚಾಸಾಃ 1 ಬಸಪ್ಪ ಅವರು ಜೈನ ಸಮಾಜದವರಿಗೂ, ನಮ್ಮ ಸಮಾಜದವರಿಗೂ ಹೊಡದಾಟ ಆಗಿದೆ ಎಂದು ದೂರು ಕೊಟ್ಟಿದ್ದಾರೆ. ಘಟನೆಯ ಬಗ್ಗೆ ಪೋಲಿಸರು ನನ್ನನ್ನು ವಿಚಾರಿಸಿದ್ದಾರೆ. ಪೋಲಿಸರಿಗೆ ನಾನು ಹೇಳಿಕೆ ನೀಡಿರುವುದಿಲ್ಲ. ಎರಡು ದಿನ ಬಿಟ್ಟು ಪೋಲಿಸರು ಜಗಳವಾದ ಜಾಗಕ್ಕೆ ಬಂದಿದ್ದರು. ಪೋಲಿಸರು ನಮ್ಮನ್ನು ವಿಚಾರಿಸಿದರು, ನಾನು ಜಗಳವಾದ ಜಾಗ ಇದೆ ಎಂದು ತೋರಿಸಿದ್ದೇನೆ. ಪೋಲಿಸರು ನನ್ನ ಸಹಿ ಮಾಡಿಸಿಕೊಂಡರು. ಸಾಕ್ಷಿಗೆ ಒಂದು ದಾಖಲೆ ತೋರಿಸಿದ್ದು ಅದರಲ್ಲಿ ತಮ್ಮ ಸಹಿ ಇರುವುದಾಗಿ ಗುರುತಿಸಿರುತ್ತಾರೆ. ಆ ದಾಖಲೆಯು ಅಪರಾಧ ಸ್ಥಳದ ಪಂಚನಾಮೆ ಆಗಿದ್ದು ಅದನ್ನು ಈಗಾಗಲೇ ನಿಪಿ-14 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-14 [ಬಿ] ಎಂದು ಗುರುತಿಸಲಾಯಿತು. ಸಾಕ್ಷಿಗೆ ಮೂರು ಪೋಟೋಗಳನ್ನು ತೋರಿಸಲಾಗಿದ್ದು ಅವುಗಳನ್ನು ಜಗಳ ಆಗಿದ್ದ ಸ್ಥಳದಲ್ಲಿ ಪಂಚನಾಮೆ ಸಮಯದಲ್ಲಿ ತೆಗೆಯಲಾಯಿತು ಎಂದು ಹೇಳಿದ್ದಾರೆ. [ ಭಾರತ ಸಾಕ್ಷಾಧಿನಿಯಮ ಕಲಂ 65 ಬಿ ಅಡಿಯಲ್ಲಿ ಪ್ರಮಾಣ ಪತ್ರವನ್ನು ನೀಡದೇ ಇರುವುದರಿಂದ ಪೋಟೋಗಳನ್ನು ಮತ್ತು ವಿಡಿಯೋವನ್ನು ಸಾಕ್ಷಿಯಾಗಿ ಗುರುತಿಸಿರುವುದಿಲ್ಲ.]

4. ನಾನೇ ಬಿದ್ದು ಕಾಲಿಗೆ ಪೆಟ್ಟಾಗಿದ್ದರಿಂದ ನಾನು ಹಾರೂಗೇರಿ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದೇನೆ. ಪೋಲಿಸರು ಸ್ಥಳಕ್ಕೆ ಬರುವ ಹಿಂದಿನ ದಿನವೇ ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದೇನು. ನಾನು ವೈದ್ಯರ ಮುಂದೆ ನಾನೇ ಬಿದ್ದು ಪೆಟ್ಟು ಮಾಡಿಕೊಂಡಿದ್ದೇನೆ ಎಂದು ಹೇಳಿದ್ದೇನೆ.

5. ಸ್ಥಳಕ್ಕೆ ಬಂದಿದ್ದ ಪೋಲಿಸರು ಸ್ಥಳದಿಂದ ಯಾವುದಾದರೂ ವಸ್ತುಗಳನ್ನು ತೆಗೆದುಕೊಂಡಿದ್ದ ಬಗ್ಗೆ ನಾನು ನೋಡಿರುವುದಿಲ್ಲ. ಪೋಲಿಸರಿಗೆ ನಾನು ಸ್ಥಳದಲ್ಲಿದ್ದ ಯಾವುದೇ ವಸ್ತುಗಳನ್ನು ತೋರಿಸಿರುವುದಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಪಂಚನಾಮೆಯನ್ನು ಮತ್ತು ಗಾಯಾಳುವಿನ ಹೇಳಿಕೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**ಪಾಟೀ ಸವಾಲು : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಮುಗಳಖೋಡ ಗ್ರಾಮದ ಮಾದರ ಓಣಿಯಲ್ಲಿರುವ ಖಾಲಿ ಜಾಗ ಸರ್ಕಾರದ ಜಾಗ ಎನ್ನುವುದು ಸರಿ. ಆ ಜಾಗದಲ್ಲಿ ಯಲ್ಲಮ್ಮ ದೇವಿ ಪಾದ ಕಟ್ಟೆ ಇದೆ ಎನ್ನುವುದು ಸರಿ. ಆ ಜಾಗದ ವಿಚಾರದಲ್ಲಿ ನಮ್ಮ ಸಮಾಜದವರಿಗೂ ಮತ್ತು ಜೈನ ಸಮಾಜದವರಿಗೂ ತಕರಾರು ಇದೆ ಎನ್ನುವುದು ಸರಿ. ಆ ಜಾಗದಲ್ಲಿ ನಮ್ಮ ಸಮಾಜದವರು ಭವನ ನಿರ್ಮಿಸಬೇಕೆಂದಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಅದೇ ಜಾಗದಲ್ಲಿ ಬಾಬನ್ನನವರು ಅವರ ಸಮಾಜಕ್ಕೆ ಕಟ್ಟಡ ಕಟ್ಟಬೇಕೆಂದು ತಯಾರಿ ನಡೆಸಿದ್ದರು ಎನ್ನುವುದು ಸರಿ. ಆ ಸ್ಥಳದಲ್ಲಿ ಜೈನ ಸಮಾಜದವರು ಕಟ್ಟಡ ನಿರ್ಮಿಸಬಾರದೆಂದು ನಮ್ಮ ಸಮಾಜದವರು ಪುರಸಭೆಗೆ ತಕರಾರು ಸಲ್ಲಿಸಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಆ ಸ್ಥಳಕ್ಕೆ ತಹಶೀಲ್ದಾರವರು ಭೇಟಿ ನೀಡಿ ಅದು ಸರ್ಕಾರಿ ಜಾಗ ಎಂದು ಅಲ್ಲಿ ಕಟ್ಟಡ ಕಟ್ಟಬಾರದು ಎಂದು ಸೂಚಿಸಿದ್ದರು ಎನ್ನುವುದು ನನಗೆ ಗೊತ್ತಿಲ್ಲ.

2. ದಿನಾಂಕಃ 26-08-2017 ರಂದು ಚಾಸಾಃ 31 ದುರ್ಗಪ್ಪ ಅವರು ಓಣಿಗೆ ಹೊಂದಿಕೊಂಡಿರುವ ಖಾಲಿ ಜಾಗದಲ್ಲಿ ಜೈನ ಸಮಾಜದವರು ಕಟ್ಟಡ ಕಟ್ಟುತ್ತಿದ್ದಾರೆ, ಕಬ್ಬಿಣದ ಸರಳುಗಳನ್ನು ನಿಲ್ಲಿಸಿದ್ದಾರೆ, ಕಟ್ಟಡದ ಕೆಲಸ ಪ್ರಾರಂಭಿಸಿದ್ದಾರೆ, ಪುರಸಭೆಗೆ ಹೋಗಿ ತಕರಾರು ಕೊಡೋಣ ಬನ್ನಿ ಎಂದು ನನಗೆ ಹೇಳಿದನು ಎನ್ನುವುದು ಸರಿಯಲ್ಲ. ಆ ರೀತಿಯಾಗಿ ನಾವು ಸ್ಥಳಕ್ಕೆ ಹೋಗಿ ನೋಡಿದಾಗ ಆರೋಪಿತರು ಸ್ಥಳದಲ್ಲಿ ಕಟ್ಟಡದ ಕಾಮಗಾರಿ ಮಾಡುತ್ತಾ ಸ್ಥಳದಲ್ಲಿ ಇದ್ದರು ಎನ್ನುವುದು ಸರಿಯಲ್ಲ.

3. ನಾವು ಪುರಸಭೆಗೆ ಹೋಗಿ ಆಡಳಿತ ಅಧಿಕಾರಿಯಾದ ಚಾಸಾಃ 35 ಸತ್ಯನಾರಾಯಣರಾವ ಅವರನ್ನು ಭೇಟಿ ಮಾಡಿ ಆರೋಪಿತರು ಕಟ್ಟಡ ಕಟ್ಟುತ್ತಿದ್ದ ಬಗ್ಗೆ ತಿಳಿಸಿದೇವು ಎನ್ನುವುದು ಸರಿಯಲ್ಲ. ಆ ಸಮಯದಲ್ಲಿ ಚಾಸಾಃ 35 ರವರು ವಿವಾದತ ಸ್ಥಳದಲ್ಲಿ ಕಟ್ಟಡ ಕಟ್ಟದಂತೆ ಆರೋಪಿತರಿಗೆ ನೋಟಿಸ ನೀಡಲಾಗಿದೆ ಎಂದು ತಮ್ಮ ಸಿಬ್ಬಂದಿಯವರ ಮುಖಾಂತರ ತಿಳಿಸಿದರು ಎನ್ನುವುದು ಸರಿಯಲ್ಲ.

4. ನಂತರ ನಾನು, ಚಾಸಾಃ 35 ರವರು ಮತ್ತು ನಮ್ಮ ಸಮಾಜದವರಾದ ಚಾಸಾಃ1, ಚಾಸಾಃ 9 ರಿಂದ ಚಾಸಾಃ 30, ಚಾಸಾಃ 32 ರಿಂದ ಚಾಸಾಃ 34 ರವರು ವಿವಾದಿತ ಸ್ಥಳಕ್ಕೆ ಬಂದೇವು ಎನ್ನುವುದು ಸರಿಯಲ್ಲ. ಆ ಸಮಯದಲ್ಲಿ ಚಾಸಾಃ 35 ರವರು ಆರೋಪಿತರಿಗೆ ಸ್ಥಳದಲ್ಲಿ ಕಟ್ಟಡ ಕಟ್ಟಬಾರದು ಎಂದು ಸೂಚಿಸಿದರು ಎನ್ನುವುದು ಸರಿಯಲ್ಲ. ಆ ಸಮಯದಲ್ಲಿ ಆರೋಪಿತರು ಚಾಸಾಃ 35 ರವರಿಗೆ ನಾವು ಕಟ್ಟಡ ಕಾಮಗಾರಿ ನಿಲ್ಲಿಸುವುದಿಲ್ಲ ಎಂದು ಹೇಳಿದರು ಎನ್ನುವುದಕ್ಕೆ ಸಾಕ್ಷಿ ಆ ಸಮಯದಲ್ಲಿ ನಾನು ಸ್ಥಳದಲ್ಲಿ ಇರಲಿಲ್ಲ ಎಂದು ಹೇಳಿದ್ದಾರೆ. ಆ ಸಮಯದಲ್ಲಿ ಕಲ್ಲಿನ ಗುಡ್ಡೆಯ ಮೇಲೆ ನಿಂತಿದ್ದ ಚಾಸಾಃ32 ಪ್ರಕಾಶ ಕಡಕೋಳ ಅವರು ಜಾರಿ ಕೆಳಗೆ ಬಿದ್ದಿದ್ದನ್ನು ನಾನು ನೋಡಿರುವುದಿಲ್ಲ. ನಮ್ಮ ಸಮಾಜದವರು ಚಾಸಾಃ 32 ಪ್ರಕಾಶ ಕಡಕೋಳ ಅವರನ್ನು ಎಬ್ಬಿಸಲು ಹೋದಾಗ ಎಲ್ಲಾ ಆರೋಪಿತರು ನಮಗೆ ಜಾತಿ ನಿಂದನೆ

ಮಾಡಿ, ಬಂಬು ಕಟ್ಟಿಗೆ, ಕಬ್ಬಿಣದ ಸರಳು ಮತ್ತು ಕಲ್ಲುಗಳಿಂದ ನಮ್ಮ ಮೇಲೆ ಹಲ್ಲೆ ಮಾಡಿದರು ಎನ್ನುವುದು ಸರಿಯಲ್ಲ.

5. ಆ ಹಲ್ಲೆಯಿಂದ ನನಗೆ ಪೆಟ್ಟಾಗಿದ್ದರಿಂದ ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದೇನೆ ಎನ್ನುವುದು ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ ವೈದ್ಯರ ಮುಂದೆ ಜಗಳದಲ್ಲಿ ಆರೋಪಿತರು ಹಲ್ಲೆ ಮಾಡಿದ್ದರಿಂದ ನನಗೆ ಪೆಟ್ಟಾಗಿದೆ ಎಂದು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

6. ಮರುದಿನ ಪೋಲಿಸರು ಘಟನಾ ಸ್ಥಳಕ್ಕೆ ಬಂದಾಗ ಆರೋಪಿತರು ಹಲ್ಲೆ ಮಾಡಲು ಉಪಯೋಗಿಸಿದ ಬಂಬು, ಕಟ್ಟಿಗೆ, ಕಲ್ಲುಗಳು, ಕಬ್ಬಿಣದ ಸರಳುಗಳನ್ನು ನಾನು ಪೋಲಿಸರಿಗೆ ತೋರಿಸಿದ್ದೇನೆ, ಪೋಲಿಸರು ಅವುಗಳನ್ನು ಜಪ್ತು ಮಾಡಿದರು ಎನ್ನುವುದು ಸರಿಯಲ್ಲ. ನಿಪಿ-14 ರಂತೆ ಪಂಚನಾಮೆ ಮಾಡಿದ ನಂತರ ಪೋಲಿಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ ಎನ್ನುವುದು ಸರಿಯಲ್ಲ. ಆ ಹೇಳಿಕೆಯಲ್ಲಿ ದಿನಾಂಕಃ 26-08-2017 ರಂದು ಮುಂಜಾನೆ 10:00 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ಚಾಸಾಃ 31 ರವರು ನಮ್ಮ ಓಣಿಯಲ್ಲಿಯ ಮನೆ ಮನೆಗೆ ಬಂದು, ಮಾದರ ಓಣಿಯಲ್ಲಿಯ ಜಾಗೆಯಲ್ಲಿ ಜೈನ ಸಮಾಜದವರು ಕಟ್ಟಡ ಕಟ್ಟಲು ಕಬ್ಬಿಣದ ಸರಳುಗಳನ್ನು ನಿಲ್ಲಿಸುವುದು, ಕೆಲಸ ಪ್ರಾರಂಭಿಸಿರುತ್ತಾರೆ ಅದಕ್ಕಾಗಿ ಎಲ್ಲರೂ ಪುರಸಭೆಯ ಕಚೇರಿಯ ಕಡೆಗೆ ಹಿರಿಯರು ಕರೆದಿರುತ್ತಾರೆ ಅಂತಾ ಹೇಳುತ್ತಾ ಹೋಗಿರುತ್ತಾನೆ. ನಾನು ಪುರಸಭೆಗೆ ಹೋಗುವಾಗ ದಾರಿಯಲ್ಲಿ ನೋಡಲಾಗಿ ಆರೋಪಿತರು ವಿವಾದಿತ ಜಾಗದಲ್ಲಿ ಕಬ್ಬಿಣದ ಸರಳುಗಳನ್ನು ನಿಲ್ಲಿಸುವುದು ಮತ್ತು ಕಟ್ಟಡದ ಕೆಲಸ ಮಾಡುತ್ತಿದ್ದರು, ಕೆಲವರು ಕುಳಿತಿದ್ದರು , ಅದರಿಂದ ನಮ್ಮ ಸಮಾಜದ ಹಿರಿಯರು ಮತ್ತು ಹೆಂಗಸರು ಕೂಡಿಕೊಂಡು ತಕರಾರು ಇರುವ ಜಾಗದಲ್ಲಿ ಕಟ್ಟಡ ಆಗಬಾರದು ಎಂದು ವಿಷಯ ತಿಳಿಸಲು ಮುಗಳಖೋಡ ಪುರಸಭೆಗೆ ಹೋದೇವು. ನಮ್ಮೊಂದಿಗೆ ಸಾಕ್ಷಿದಾರರಾದ ಶ್ರೀಶೈಲ ಕಡಕೋಳ, ಮಾರುತಿ ಕೆಳಗಡೆ ಇತರರು ಇದ್ದರು. ಅಲ್ಲಿ ಚೀಪ್ ಆಫೀಸರ ಅವರಿಗೆ ಭೇಟಿ ಆಗಿ ಅವರಿಗೆ ಜಾಗದ ಬಗ್ಗೆ ವಿಷಯ ಹೇಳಿ ಕಟ್ಟಡ

ಕಟ್ಟುವುದನ್ನು ನಿಲ್ಲಿಸಲು ಹೇಳಿದೇವು, ಚಾಸಾಃ 35 ಚೀಪ್ ಆಫೀಸರ ಹೊಸದಾಗಿ ಬಂದಿದ್ದರಿಂದ ಅವರು ಪುರಸಭೆಯಲ್ಲಿ ಕೆಲಸ ಮಾಡುವವರಿಗೆ ವಿಚಾರಿಸಿದಾಗ ಚಾಸಾಃ 44 ಕಾಶಿಲಿಂಗ ಕಿಲಾರೆ ಅವರು ಮೊದಲು ಕಟ್ಟಡ ಕಟ್ಟಲು ಅನುಮತಿ ನೀಡಿದ್ದರು ಎಂದು ನಂತರ ಅದನ್ನು ರದ್ದು ಮಾಡಿದ್ದರು ಎಂದು, ಆ ಬಗ್ಗೆ ಜೈನ ಸಮುದಾಯವದವರಿಗೆ ನೋಟಿಸ ನೀಡಿದ್ದು, ಅವರು ಅದನ್ನು ಸ್ವೀಕರಿಸಿರುವುದಿಲ್ಲ ಎಂದು ಚಾಸಾಃ 35 ರಿಂದ ಚಾಸಾಃ 39 ರವರು ವಿವಾದಿತ ಸ್ಥಳಕ್ಕೆ ಭೇಟಿ ನೀಡಿದ್ದರು ಎಂದು, ಆಗ ಆರೋಪಿತರು ಸ್ಥಳದಲ್ಲಿ ಕಬ್ಬಿಣದ ಸರಳುಗಳನ್ನು ನಿಲ್ಲಿಸುತ್ತಿದ್ದರು, ನೀವು ಆ ಸಮಯದಲ್ಲಿ ನಾನು ಹೋಗಿ ಕಲ್ಲಿನ ಗುಡ್ಡೆಯ ಹತ್ತಿರ ನಿಂತಿದ್ದೇನೆ ಎಂದು, ಆಗ ಚೀಪ್ ಆಫೀಸರ ಅವರು ಸ್ಥಳದಲ್ಲಿ ಕಟ್ಟಡ ಕಟ್ಟಬಾರದು ಎಂದು ಹೇಳಿದರೂ ಸಹ ಆರೋಪಿತರು ನಾವು ಕೆಲಸ ನಿಲ್ಲಿಸುವುದಿಲ್ಲ ಹೇಳಿದರು ಎಂದು, ಅಷ್ಟರಲ್ಲಿ ಚಾಸಾಃ 32 ಪ್ರಕಾಶ ಅವರು ಜಾರಿ ಕೆಳಗೆ ಬಿದ್ದರು ಎಂದು, ನಮ್ಮ ಸಮಾಜದವರು ಅವನನ್ನು ಎಬ್ಬಿಸಲು ಹೋದಾಗ ಆರೋಪಿತರು ಒಮ್ಮೇಲೆ ಕೂಗುತ್ತಾ, ಹೊಡೆಯುತ್ತಾ ಜಾತಿ ಹೆಸರು ಹಿಡಿದು ಜಾತಿ ನಿಂದನೆ ಮಾಡಿ ನಮಗೆ ಕಲ್ಲುಗಳಿಂದ, ಕಬ್ಬಿಣದ ಸರಳಿನಿಂದ, ಬಂಬು ಕಟ್ಟಿಗೆಯಿಂದ ನಮಗೆ ಹಲ್ಲೆ ಮಾಡಿದರೆಂದು, ಆ ಸಮಯದಲ್ಲಿ ನನಗೆ ಕಲ್ಲು ಬಿದ್ದು ನನ್ನ ಬಲಗಾಲು ಮೊಣಕಾಲು ಮತ್ತು ಎಡಗಾಲು ಹಡ್ಡದ ಹತ್ತಿರ ಗಾಯ ಆಯಿತು ಎಂದು, ನಮ್ಮ ಸಮಾಜದ ಕೆಲವು ಹೆಣ್ಣು ಮಕ್ಕಳಿಗೂ ಸಹ ಆರೋಪಿತರು ಹೊಡೆಬಡೆ ಮಾಡಿದ್ದರಿಂದ ಅವರಿಗೂ ಪೆಟ್ಟಾಯಿತು, ಅಲ್ಲಿಂದ ನಾವು ಓಡಿಹೋದೇವು, ನಂತರ ಪೋಲಿಸರು ಸ್ಥಳಕ್ಕೆ ಬಂದಾಗ ನಾನು ಪೋಲಿಸರಿಗೆ ಸ್ಥಳ ತೋರಿಸಿ ಆರೋಪಿತರು ಹಲ್ಲೆ ಮಾಡಲು ಬಳಸಿದ ಕಲ್ಲುಗಳು, ಕಬ್ಬಿಣದ ಸರಳು, ಬಂಬು ಕಟ್ಟಿಗೆಯನ್ನು ತೋರಿಸಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ–16 ಎಂದು ಗುರುತಿಸಲಾಯಿತು.

7. ನ್ಯಾಯಾಲಯದಲ್ಲಿ ಹಾಜರುಮಾಡಿರುವ, ಈಗಾಗಲೇ ಸಾಕ್ಷಿಯಾಗಿ ಮು.ಮಾ.1 ರಿಂದ ಮು.ಮಾ.3 ಎಂದು ಗುರುತಿಸಿರುವ ವಸ್ತುಗಳನ್ನು ಪೋಲಿಸರು ನನ್ನ ಸಮಕ್ಷಮ ಸ್ಥಳದಲ್ಲಿ ತೆಗೆದುಕೊಂಡರು ಎನ್ನುವುದು ಸರಿಯಲ್ಲ. ನಾನು ಪೋಲಿಸರಿಗೆ ಹೇಳಿಕೆ ನೀಡುವ ಸಮಯದಲ್ಲಿ

ಪೋಲಿಸರು ವಿಡಿಯೋ ರೆಕಾರ್ಡಿಂಗ್ ಮಾಡಿದ್ದಾರೆ ಎನ್ನುವುದು ಸರಿ. ದಿನಾಂಕಃ 26-08-2017 ರಂದು ವಿವಾದಿತ ಸ್ಥಳದಲ್ಲಿ ಘಟನೆ ನಡೆದಿದ್ದು ಆರೋಪಿತರು ನಮ್ಮ ಸಮಾಜದವರ ಮೇಲೆ ಹಲ್ಲೆ ಮಾಡಿದ್ದು, ನಾನೂ ಹಲ್ಲೆಗೆ ಒಳಗಾಗಿ ನನಗೆ ಗಾಯ ಆಗಿದ್ದರೂ ಸಹ, ನಿಪಿ-16 ರಂತೆ ಹೇಳಿಕೆ ನೀಡಿದ್ದರೂ ಸಹ ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ1 ಮತ್ತು 2 ನೇ ಆರೋಪಿತರ ಪರ ಶ್ರೀ. ಬಿ.ಜೆ.ಜಿ. ವಕೀಲರಿಂದ**

ಬಾಬಣ್ಣವರ ಅವರಿಗೆ ಸೇರಿದ ಖಾಲಿ ಜಾಗವನ್ನು ನಮ್ಮ ಸಮಾಜದವರು ಪಡೆಯಬೇಕೆಂದು ಹಠ ಹಿಡಿದಿದ್ದರು ಎನ್ನುವುದು ಸರಿ. ಪಾದು ಕಟ್ಟೆ ಇರುವ ಜಾಗವನ್ನು ಬಾಬಣ್ಣನವರು ನಮ್ಮ ಸಮಾಜಕ್ಕೆ ನೀಡಿದ್ದು, ಆ ಜಾಗವನ್ನು ನಮ್ಮ ಸಮಾಜದವರು ಉಪಯೋಗಿಸಿಕೊಳ್ಳುತ್ತಿದ್ದೇವು ಎನ್ನುವುದು ಸರಿ. ನಾನು ಪೋಲಿಸರಿಗೆ ಹೇಳಿಕೆ ನೀಡಿರುವುದಿಲ್ಲ. ವಿಡಿಯೋವನ್ನು ಯಾರು ಮಾಡಿದ್ದಾರೆ, ಯಾವ ಕಾರಣಕ್ಕೆ ಮಾಡಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸಿಡಿಗಳನ್ನು ಯಾರು ತಯಾರು ಮಾಡಿದ್ದರು, ಯಾವಾಗ ತಯಾರು ಮಾಡಿದ್ದರು ಎನ್ನುವುದು ನನಗೆ ಗೊತ್ತಿರುವುದಿಲ್ಲ. ವಿಡಿಯೋವನ್ನು ಮೊಬೈಲನಲ್ಲಿ, ರೆಕಾರ್ಡರನಲ್ಲಿ ಅಥವಾ ಕ್ಯಾಮರಾದಲ್ಲಿ ಮಾಡಿದ್ದಾರೋ ಎನ್ನುವುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಅಂತಹ ವಿಡಿಯೋವನ್ನು ಪೋಲಿಸರು ನನಗೆ ಇದುವರೆಗೂ ತೋರಿಸಿರುವುದಿಲ್ಲ.

2. ಸಾಮಾನ್ಯವಾಗಿ ಊರಿನಲ್ಲಿ ಮು.ಮಾ.1, ಮು.ಮಾ.2 ಮತ್ತು ಮು.ಮಾ.3 ರಂತಹ ವಸ್ತುಗಳು ಬಿದ್ದಿರುತ್ತವೆ ಎನ್ನುವುದು ಸರಿ. ಬಾಬಣ್ಣ ಅವರು ಬಹಳ ಹಿಂದೆ ಮನೆ ಕಟ್ಟುವ ಸಮಯದಲ್ಲಿ ಪಾಯ ತೆಗೆದು ಕಬ್ಬಿಣದ ಸರಳುಗಳನ್ನು ಹಾಕಿ ಅಣಿ ಮಾಡಿದ್ದರು ಎನ್ನುವುದು ಸರಿ.

3. ವಿವಾದಿತ ಸ್ಥಳದಲ್ಲಿ ಕಟ್ಟಡ ಕಟ್ಟುವ ವಿಚಾರದಲ್ಲಿ ಜಗಳ ಆಗಿತ್ತು ಎನ್ನುವುದು ನನಗೆ ಗೊತ್ತಿಲ್ಲ ಎನ್ನುವುದು ಸರಿ.

**ಪಾಟೀ ಸವಾಲುಃ 3 ರಿಂದ 34 ನೇ ಆರೋಪಿತರ ಪರ ಶ್ರೀ ಎ.ಬಿ.ಬಿ .ವಕೀಲರಿಂದ**

1 ಮತ್ತು 2 ನೇ ಆರೋಪಿತರ ಪರ ಶ್ರೀ. ಬಿ.ಜೆ.ಜಿ. ವಕೀಲರು ಮಾಡಿದ ಪಾಟೀ ಸವಾಲನ್ನು 3 ರಿಂದ 34 ನೇ ಆರೋಪಿತರ ಪರ ಶ್ರೀ ಎ.ಬಿ.ಬಿ ವಕೀಲರು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.